# ನಗರಸಭಾ ಕಾರ್ಯಾಲಯ, ಭದ್ರಾವತಿ

ನಂ:ಆವಿ/ಸಿಆರ್:09/09-10 ದಿನಾಂಕ:02-01-2010

## ಟೆಂಡರ್ ಪ್ರಕಟಣೆ

ಈ ಮೂಲಕ ಮ್ಯಾನ್ ಪವರ್ ಏಜೆನ್ಸಿಯವರಿಗೆ ತಿಳಿಯ ಪಡಿಸುವುದೇನೆಂದರೆ ಭದ್ರಾವತಿ ನಗರಸಭೆಯ ಡಂಪರ್ ಪ್ಲೆಸರ್ ವಾಹನಗಳಿಗೆ ಮೂರು (3) ಜನ ಭಾರಿ ವಾಹನ ಚಾಲಕರು ಮತ್ತು ಒಬ್ಬರು ಜೆ.ಸಿ.ಬಿ ಮಾದರಿಯ ಟ್ರ್ಯಾಕ್ಟರ್ ಮೌಂಟೆಡ್ ಫ್ರಂಟ್ ಎಂಡ್ ಲೋಡರ್ ವಿತ್ ಬ್ಯಾಕ್ ವಾಹನಕ್ಕೆ ನುರಿತ, ಅನುಭವಿ ವಾಹನ ಚಾಲಕ ಮತ್ತು ಸಹಾಯಕ ಹಾಗೂ ನಗರಸಭೆ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ರಾಷ್ಟ್ರೀಯ ನದಿ ಸಂರಕ್ಷಣೆ ಯೋಜನೆಯಡಿಯಲ್ಲಿ ನಿರ್ಮಿಸಿರುವ ಸಾಮೂಹಿಕ ಶೌಚಾಲಯಗಳ ನಿರ್ವಹಣೆಗೆ 13 (ಹದಿಮೂರು) ಜನ ಹಾಗೂ ನಗರಸಭಾ ವ್ಯಾಪ್ತಿಯ ವಿವಿಧ ಬಡಾವಣೆ ಗಳಲ್ಲಿ ನಿರ್ಮಿಸಿರುವ ಶೌಚಾಲಯಗಳಿಗೆ 5 ಜನ ಕಾರ್ಮಿಕರನ್ನು (ಒಟ್ಟು 13+5=18 ಶೌಚಾಲಯಗಳಿಗೆ) ಮ್ಯಾನ್ ಪವರ್ ಏಜೆನ್ಸಿಗಳ ಮೂಲಕ 12 ತಿಂಗಳ ಅವಧಿಗೆ ಗುತ್ತಿಗೆಗೆ ಪಡೆಯಲು ದರಪಟ್ಟಿ ಆಹ್ವಾನಿಸಲಾಗಿರುತ್ತದೆ.

ಆಸಕ್ತಿವುಳ್ಳವರು ಒಬ್ಬ ವಾಹನ ಚಾಲಕ ಹಾಗೂ ಸಹಾಯಕರಿಗೆ, ಒಬ್ಬ ಶೌಚಾಲಯ ನಿರ್ವಹಣೆ ಮಾಡುವ ಕಾರ್ಮಿಕರಿಗೆ ಒಂದು ತಿಂಗಳಿಗೆ ಕೋರುವ ಕನಿಷ್ಠ ದರವನ್ನು ನಮೂದಿಸಿ ದಿನಾಂಕ:**08-02-10** ರ ಸಂಜೆ **4-30** ಗಂಟೆ ಒಳಗಾಗಿ ಪೌರಾಯುಕ್ತರು ನಗರಸಭೆ ಭದ್ರಾವತಿ ರವರಿಗೆ ತಲುಪುವಂತೆ ದರಪಟ್ಟಿ ಸಲ್ಲಿಸಬಹುದಾಗಿದೆ.

### ಷರತ್ತುಗಳು

1. ಟೆಂಡರ್ ನೊಂದಿಗೆ ಇ.ಎಂ.ಡಿ ಹಣ ರೂ 25,000-00 ಗಳ ಡಿ.ಡಿಯನ್ನು ಪೌರಾಯುಕ್ತರು ನಗರಸಭೆ ಭದ್ರಾವತಿ ರವರಿಗೆ ಪಾವತಿಯಾಗುವಂತೆ ಲಗತ್ತಿಸಿ ಸಲ್ಲಿಸತಕ್ಕದ್ದು.
2. ಟೆಂಡರ್ ಫಾರಂ ಕೋರಿಕೆಗೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ:**06-02-10**
3. ಟೆಂಡರ್ ಫಾರಂ ಶುಲ್ಕ ರೂ 500-00 ಗಳನ್ನು ಕಛೇರಿಯ ನಗದು ವಿಭಾಗದಲ್ಲಿ ಪಾವತಿಸಿ ಫಾರಂ ಪಡೆಯಲು ಕಡೆಯ ದಿನಾಂಕ:**06-02-10**
4. ಟೆಂಡರ್ ದಾರರು ಟೆಂಡರ್ ಪಡೆದ ನಂತರ ಕಾರ್ಮಿಕ ಇಲಾಖೆಯಿಂದ ಪರವಾನಿಗೆಯನ್ನು ಮತ್ತು ಭವಿಷ್ಯ ನಿಧಿ ನೊಂದಣಿ ಪತ್ರವನ್ನು ಕಾರ್ಯಾದೇಶ ಪಡೆದ 15 ದಿವಸಗಳ ಒಳಗಾಗಿ ಕಛೇರಿಗೆ ಹಾಜರ್ಪಡಿಸತಕ್ಕದ್ದು.
5. ಟೆಂಡರ್ ದಾರರು ಈ ಕಛೇರಿಗೆ ನಿಯೋಜಿಸುವ ವಾಹನ ಚಾಲಕರ ಭಾರಿ ವಾಹನಗಳ ಚಾಲನ ಪರವಾನಿಗೆಯನ್ನು ಟೆಂಡರ್ ನೊಂದಿಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
6. ಟೆಂಡರ್ ದಾರರು ಕಾರ್ಮಿಕರಿಗೆ ಕಾರ್ಮಿಕ ಇಲಾಖೆಯಿಂದ ನಿಗಧಿಪಡಿಸಿರುವ ಕನಿಷ್ಠ ವೇತನದಂತೆ ಕಾರ್ಮಿಕರಿಗೆ ವೇತನ ಪಾವತಿಸಲು ಬದ್ದರಿರತಕ್ಕದ್ದು.
7. ಟೆಂಡರ್ ದಾರರು ಕಾರ್ಮಿಕರಿಗೆ ಗುಂಪು ವಿಮೆ ಮತ್ತು ಭವಿಷ್ಯ ನಿಧಿ ಮಾಡಿಸಲು ಬದ್ಧರಿರತಕ್ಕದ್ದು.
8. ಶೌಚಾಲಯಗಳಿಗೆ ಕಾರ್ಮಿಕರನ್ನು ಬೆಳಗ್ಗೆ 6-00 ಗಂಟೆ ಯಿಂದ ಬೆಳಗ್ಗೆ 10-00 ಗಂಟೆ ವರೆಗೆ ಹಾಗೂ ಸಂಜೆ 5-00 ಗಂಟೆ ಯಿಂದ ರಾತ್ರಿ 9-00 ಗಂಟೆ ವರೆಗೆ ನಿಯೋಜಿಸಲು ಭದ್ಧರಿರತಕ್ಕದ್ದು
9. ಈ ಕಛೇರಿಗೆ ನಿಯೋಜಿಸುವ ಕಾರ್ಮಿಕರು 18 ವರ್ಷ ಮೇಲ್ಪಟ್ಟ ಮತ್ತು 40 ವರ್ಷ ವಯಸ್ಸಿನ ಒಳಗಿನ ವಯೋಮಾನದರಾಗಿರತಕ್ಕದ್ದು.
10. ಈ ಟೆಂಡರ್ ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷಕ್ಕೆ ಮಾತ್ರ ಸೀಮಿತವಾಗಿರುತ್ತದೆ.
11. ಟೆಂಡರ್ ನ್ನು ಸಾಧ್ಯವಾದರೆ ಅಂದೇ ಹಾಜರಿರುವ ಟೆಂಡರ್ ದಾರರ ಸಮಕ್ಷಮ ತೆರೆಯಲಾಗುವುದು ತಪ್ಪಿದಲ್ಲಿ ಮುಂದಿನ ದಿನಾಂಕವನ್ನು ತಿಳಿಸಲಾಗುವುದು.
12. ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
13. ಹೆಚ್ಚಿನ ಷರತ್ತುಗಳು ಮತ್ತು ವಿವರಗಳನ್ನು ಕಛೇರಿಯ ಆರೋಗ್ಯ ವಿಭಾಗದಿಂದ ಪಡೆಯಬಹುದು

ಶ್ರೀಮತಿ ಎಂ. ವೈಶಾಲಿ<br>ಅಧ್ಯಕ್ಷರು<br>ನಗರಸಭೆ, ಭದ್ರಾವತಿ ಹಾಗೂ<br>ಉಪವಿಭಾಗಾಧಿಕಾರಿಗಳು<br>ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ.

ಶ್ರೀ ಬಿ.ಡಿ. ಬಸವರಾಜಪ್ಪ<br>ಪೌರಾಯುಕ್ತರು<br>ನಗರಸಭೆ, ಭದ್ರಾವತಿ